ಜೂನ್ ಮೊದಲ ವಾರ ಮುಂಗಾರು ಆಗಮಿಸುವ ಸಮಯ. ಮುಂಗಾರಿನ ಆಗಮನದೊಂದಿಗೆ ಮಣ್ಣು ಮೆದುವಾಗುತ್ತದೆ, ಬೀಜ ಚಿಗುರಾಗುತ್ತದೆ, ಹಸಿರು ಹೊನ್ನಾಗುತ್ತದೆ. ಇದು ಮಳೆಯ ಜೊತೆಗಿನ ಜೀವಜಗತ್ತಿನ ಹೊಂದಾಣಿಕೆ. ಆದರೆ, ಕಳೆದ ಕೆಲವು ವರ್ಷಗಳಿಂದ ಮಳೆಚಕ್ರದಲ್ಲಿ ಏರುಪೇರಾಗಿದೆ. ಮಳೆಯ ಕುರಿತ ಜನಪದರ ನಂಬಿಕೆ–ತಿಳಿವಳಿಕೆಗಳು ಕೈಕೊಡುತ್ತಿವೆ. ಏಕೆ ಹೀಗಾಗುತ್ತಿದೆ? ಮಳೆಯ ಕುರಿತ ಮಣ್ಣಿನ ಮಕ್ಕಳ ಅರಿವು ಹಾಗೂ ನಂಬಿಕೆಗಳ ಕುರಿತು ವಿಶಿಷ್ಟ ವಿವರಗಳನ್ನು ನಿರೂಪಿಸುವ ಈ ಲೇಖನ, ಮಳೆಋತುವಿನಲ್ಲಿ ಆಗಿರುವ ಬದಲಾವಣೆಗೆ ಕಾರಣಗಳನ್ನೂ ಯೋಚಿಸುತ್ತದೆ. ನೆಲದ ಕಣ್ಣುಗಳೆಲ್ಲ ಮುಂಗಾರಿನ ಹಂಬಲದಲ್ಲಿರುವ ಸಂದರ್ಭದಲ್ಲಿ ಪ್ರಕಟಗೊಳ್ಳುತ್ತಿರುವ ಈ ಬರಹ, ಜೂನ್ 5ರ ‘ವಿಶ್ವ ಪರಿಸರ ದಿನ’ದ ಹಿನ್ನೆಲೆಯಲ್ಲಿ ರೂಪುಗೊಂಡಿರುವ ‘ಸುಧಾ’ ವಿಶೇಷ.

■ ಜಿ. ಕೃಷ್ಣ ಪ್ರಸಾದ್

ಚಿತ್ರಗಳು: ದಿನೇಶ್ ಮಾನೀರ್

# ಬರಗೆಟ್ಟಿದೆ ಇಳೆ ಸುರಿಯಲಿ ಮಳೆ

*ಯವ್ವ ನೀಡವ್ವ, ಯಕ್ಕ ನೀಡವ್ವ,*
*ಮಕ್ಕಳು ಮರಿ ಹಸಗೊಂಡಾವೆ,*
*ಮೂರು ದಿನದಿಂದ ಅನ್ನ ನೀರು ಕಂಡಿಲ್ಲ,*
*ಯವ್ವ ನೀಡವ್ವ, ಯಕ್ಕ ನೀಡವ್ವ*
*ನಿಮ್ಮ ಮನಿ ತಣ್ಣಗಿರತೈತಿ,*
*ನಿಮ್ಮ ಮಕ್ಕಳು ಮರಿಗೆ ಪುಣ್ಯ ಬರತೈತಿ...*

ವಿನ್ಯಾಸ: ವಿಜಯಕುಮಾರಿ ಆರ್.